ಇ) ಹೊಸದುರ್ಗ ತಾಲ್ಲೂಕಿನಲ್ಲಿ ವಶಪಡಿಸಿಕೊಂಡ ಗಂಧದ ಪ್ರಮಾಣ ಮತ್ತು ಮೌಲ್ಯ ಈ ಕೆಳಕಂಡಂತಿದೆ.

ವರ್ಷ	ಗಂಧ ಪ್ರಮಾಣ ಕೆ.ಜಿ. ಯಲ್ಲಿ	ಮೌಲ್ಯ ರೂ.
೧೯೮೬-೮೭	೭೭೩	೪೧,೬೨೦-೦೦
೧೯೮೭-೮೮	೧೨೩೭	೬೫,೭೬೦-೦೦

ಈ ಪ್ರಕರಣದಲ್ಲಿ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಒಂದು ಜೀಪು ವಶಪಡಿಸಿಕೊಂಡು ಪ್ರಕರಣವನ್ನು ದಾಖಲು ಮಾಡಿ ಒಬ್ಬ ಅಪರಾಧಿಯನ್ನು ಬಂಧಿಸಿ ಮೊಕದ್ದಮೆ ಹೂಡಲಾಗಿದೆ.

ಈ) ಗ್ರಾಮದ ಜನರ ಸಹಾಯದಿಂದ ಕಳ್ಳಸಾಗಾಣಿಕೆಯಲ್ಲಿ ನಿರತವಾದ ಒಂದು ಜೀಪನ್ನು ವಶಪಡಿಸಿಕೊಂಡು ಅಕ್ರಮವಾಗಿ ಸಾಗಿಸುತ್ತಿದ್ದ ೫೪೭ ಕೆ. ಜಿ. ಗಂಧವನ್ನು ವಶಪಡಿಸಿಕೊಳ್ಳಲಾಗಿದೆ. ಇದರ ಮೌಲ್ಯ ೩೦,೦೦೦ ರೂ. ಇರುತ್ತದೆ. ಈ ವಿಷಯದಲ್ಲಿ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಒಬ್ಬ ವ್ಯಕ್ತಿಯನ್ನು ಬಂಧಿಸಿ ಮೊಕದ್ದಮೆ ಹೂಡಲಾಗಿದೆ.

ಶ್ರೀ ಜಿ. ರಾಮದಾಸ್.—ಮಾನ್ಯ ಅಧ್ಯಕ್ಷರೆ, ೧೯೮೬-೮೭ ಮತ್ತು ೧೯೮೭-೮೮ ಈ ಎರಡು ವರ್ಷಗಳಲ್ಲಿ ನಾಲ್ಕು ಪ್ರಕರಣಗಳು ಆಗಿದ್ದು, ಸೂರಾರು ಗಂಧದ ಮರಗಳನ್ನು ಅಕ್ರಮವಾಗಿ ಕಳ್ಳ ಸಾಗಾಣಿಕೆ ಮಾಡಿದ್ದಾರೆ. ಕಡಿದಂತ ಮರಗಳ ಜಾಗದಲ್ಲಿ ಕೆಳಗಡೆ ಭೂಮಿಯಲ್ಲಿ ಬೇರುಗಳು ಇದ್ದು ಅವುಗಳನ್ನು ಕೂಡ ಕಳ್ಳಸಾಗಾಣಿಕೆಯಲ್ಲಿ ಕದ್ದು ಪೂರಾಟ ಮಾಡುತ್ತಿದ್ದಾರೆ. ಅದನ್ನು ಕೂಡ ಸರ್ಕಾರ ದವರೆ ವಶಪಡಿಸಿಕೊಂಡು ಇರತಕ್ಕ ಬೇರುಗಳನ್ನು ಅಗೆದು ತೆಗೆದುಕೊಂಡಬೇಕೆಂದು ಸಲಹೆ ಕೊಡುತ್ತೇನೆ.

ಶ್ರೀ ಜಿ. ಎಸ್. ಬಾಗಲ್‌ಕೋಟೆ.—ಮಾನ್ಯ ಸದಸ್ಯರ ಸಲಹೆ ಏನು ಇದೆ, ಆ ರೀತಿ ಕ್ರಮ ಕೈಗೊಳ್ಳುವುದಕ್ಕೆ ಅಧಿಕಾರಿಗಳಿಗೆ ಆದೇಶವನ್ನು ಕೊಡುತ್ತೇನೆ.

ಶ್ರೀ ಜಿ. ರಾಮದಾಸ್.—ಹೊಸದುರ್ಗ ತಾಲ್ಲೂಕಿನ ಮಾಡದ ಕೆರೆ ಹೋಬಳಿ ಡಿ. ಮಲ್ಲಾಪುರ ಗ್ರಾಮದ ಗ್ರಾಮಸ್ಥರು ಸುಮಾರು ೫೪೭ ಕೆ.ಜಿ. ಗಂಧವನ್ನು ಹಿಡಿದಿಟ್ಟಿದ್ದಾರೆ. ಇದು ನಡೆದ ಸಂದರ್ಭದಲ್ಲಿ ಮತ್ತೆ ೩೦೦ ಕೆ. ಜಿ. ಗಂಧ ಮಧ್ಯಾಹ್ನ ಮೂರು ಗಂಟೆಯೊಳಗಾಗಿ ಸಿಕ್ಕಿದೆ, ಈ ಗಂಧ ಏನಾಯಿತು ಎನ್ನುವುದನ್ನು ತಿಳಿಸಬೇಕು.

ಶ್ರೀ ಜಿ. ಎಸ್. ಬಾಗಲ್‌ಕೋಟೆ.—ಮಾನ್ಯ ಅಧ್ಯಕ್ಷರೆ, ಡಿ. ಮಲ್ಲಾಪುರದ ಜನರಿಗೆ ಧನ್ಯವಾದ ಗಳನ್ನು ಅರ್ಪಿಸಲೇ ಬೇಕು, ಬಹಳ ಒಳ್ಳೆಯ ಕಾರ್ಯವನ್ನು ಅವರು ಮಾಡಿದ್ದಾರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಇನ್ನೂ ೩೦೦ ಕೆ. ಜಿ. ಲೆಕ್ಕ ಬಂದಿಲ್ಲವೆಂದು ಹೇಳಿದ್ದಾರೆ. ಅದರ ಬಗ್ಗೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಜಿ. ರಾಮದಾಸ್.—ಹಿಡಿದಿಟ್ಟ ಜೀಪನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅದನ್ನು ಇಲಾಖೆಗೆ ಬಿಟ್ಟುಕೊಟ್ಟರೆ ಇನ್ನು ಹೆಚ್ಚಿನ ಆಸಕ್ತಿಯಿಂದ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜಿ. ಎಸ್. ಬಾಗಲ್‌ಕೋಟೆ.—ಸನ್ಮಾನ್ಯ ಸದಸ್ಯರ ಸೂಚನೆಯನ್ನು ಪರಿಶೀಲಿಸುತ್ತೇನೆ.

ಅರಣ್ಯ ಇಲಾಖೆಯಲ್ಲಿ ಸಸಿಗಳನ್ನು ಬೆಳೆಸುತ್ತಿರುವುದು

೧೯೯೦. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಅರಣ್ಯ ಇಲಾಖೆಯು ಸಸಿಗಳನ್ನು ಬೆಳೆಸುತ್ತಿರುವುದು ನಿಜವಾಗಿರುತ್ತದೆಯೇ ?

ಆ) ರಾಜ್ಯದಲ್ಲಿ ಅರಣ್ಯ ಇಲಾಖೆಯು ಸಸಿಗಳನ್ನು ಬೆಳೆಸುತ್ತಿರುವ ಒಟ್ಟು ಸಸ್ಯ ಕ್ಷೇತ್ರಗಳೆಷ್ಟು?

ಇ) ಈ ವರ್ಷ ಒಟ್ಟು ಬೆಳೆಸಿದ ಸಸಿಗಳ ಸಂಖ್ಯೆ ಎಷ್ಟು (ಜಾತಿಗಳ ವಿವರಣೆ ಒಳಗೂಡಿ)

ಈ) ಮಂಜೂರು ಮಾಡಿದ ಕಟ್ಟಿಂಗ್ಸ್‌ಗಳನ್ನು ಸಸ್ಯ ಕ್ಷೇತ್ರಗಳಲ್ಲಿ ಬೆಳೆಸಲಾಗಿದೆಯೇ ?

ಉ) ಹಾಗಿದ್ದಲ್ಲಿ ಮಂಜೂರು ಮಾಡಿದ ಕಟ್ಟಿಂಗ್ಸ್‌ಗಳನ್ನು ೧೯೮೭-೮೮ರಲ್ಲಿ ಎಷ್ಟು ಸಂಖ್ಯೆಗಳಲ್ಲಿ ಬೆಳೆಸಲಾಗಿದೆ ?

ಊ) ಈ ಸಸಿಗಳನ್ನು ಬೆಳೆಸುವ ಸಲುವಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).— ·

ಅ) ಹೌದು.

ಆ) ರಾಜ್ಯದಲ್ಲಿ ಸುಮಾರು ಏಳು ಸಾವಿರ ಸಸ್ಯ ಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸಲಾಗುತ್ತಿದೆ. ಅದರಲ್ಲಿ ಸುಮಾರು ಒಂದು ಸಾವಿರ ಐವತ್ತು ಸಸ್ಯಕ್ಷೇತ್ರಗಳು ಅರಣ್ಯ ಇಲಾಖೆಯು ನಿರ್ವಹಣೆಯಲ್ಲಿದ್ದು, ಉಳಿದ ಸಂಖ್ಯೆ ರೈತರ ಹಾಗೂ ಇನ್ನಿತರ ಸಸ್ಯ ಕ್ಷೇತ್ರಗಳಾಗಿರುತ್ತದೆ.

ಇ) ೧೭ ಕೋಟಿ (ಸಸಿಗಳ ಜಾತಿಯ ವಿವರಣಾ ಪಟ್ಟಿಯನ್ನು ಲಗತ್ತಿಸಲಾಗಿದೆ).

ಈ) ಹೌದು.

ಉ) ಸುಮಾರು ೮,೫೮,೧೫೮ ಮಂಜೂರು ಮಾಡಿದ ಕಟ್ಟಿಂಗ್ಸ್‌ಗಳನ್ನು ಬೆಳೆಸಲಾಗಿದೆ.

ಊ) ಸುಮಾರು ೩,೧೮,೬೦೦-೦೦ನ್ನು ಖರ್ಚು ಮಾಡಲಾಗಿದೆ.

ವಿವಿಧ ಜಾತಿ ಸಸಿಗಳ ವಿವರಣೆ

ಸಸಿಗಳ ಜಾತಿ		ಸಂಖ್ಯೆ (ಲಕ್ಷಗಳಲ್ಲಿ)	
೧		೨	
೧	ಬಂಗಾಳಿ ಜಾಲಿ	೧೭೦	,,
೨	ಸರ್ವೆ	೧೮೫	,,
೩	ನಂದಿ	೧೨	,,
೪	ಮತ್ತಿ (ಬಳಾಪು)	೧೦	,,
೫	ಹುನಾಲ್	೩	,,
೬	ಸಾಗುವಾನಿ	೪೩	,,
೭	ನೀಲಗಿರಿ	೫೧೭	,,
೮	ಹಲಸು	೧೬	,,
೯	ಗೊಬ್ಬಳಿ	೧೭೩	,,
೧೦	ಬಾಗೆ	೬೦	,,
೧೧	ಹುಣಸೆ	೧೩೯	,,
೧೨	ಬಲಂಜಿ	೩೬	,,
೧೩	ಬೇವು	೬೯	,,
೧೪	ಹೊಂಗೆ	೩೪	,,
೧೫	ಸೀಮೆತಂಗಡಿ	೨೮	,,
೧೬	ಸಿಸ್ಸೂ	೭೮	,,

೧		೨	
೧೭	ಗೊಂಡಂಬಿ (ಗೇರು)	೪	,,
೧೮	ಸುಬಾಬುಲ್	೪೪	,,
೧೯	ಕಿರುಬಿದುರು	೪	,,
೨೦	ಹೆಬ್ಬಿದಿರು	೩	,,
೨೧	ಸಿಲ್ವರ್ ಓಕ್	೧೮	,,
೨೨	ಹಿಪ್ಪೆ	೮	,,
೨೩	ಮಳಿಮರ	೧	,,
೨೪	ಸೀಮೆಹುಣಸೆ	೧೦	,,
೨೫	ಹೊನ್ನೆ	೧	,,
೨೬	ನೇರಳೆ	೫	,,
೨೭	ಫೆಲ್ಟೋಫೋರಂ	೨	,,
೨೮	ಇತರ ಸಸಿಗಳು	೧೦೨೬	,,
		೨೬೦೦	,,

೧೨-೦೦ ಪಿ. ಎಂ

ಶ್ರೀ ಡಿ. ಎ. ಚಿನ್ನಪ್ಪ.—ಈಗ ತಾವು ೨೭ ಲಕ್ಷ ಸಸಿಗಳನ್ನು ಬೆಳೆಸಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ಸತ್ತುಹೋಗಿರುವ ಸಸಿಗಳೆಷ್ಟು, ಉಳಿದಿರುವ ಸಸಿಗಳೆಷ್ಟು ? ಕಳೆದ ವರ್ಷ ಮತ್ತು ಆಚೆ ವರ್ಷ ಬೆಳೆಸಿದ ಸಸಿಗಳು ಫಾರಂನಲ್ಲಿಯೇ ಉಳಿದುಕೊಂಡಿರುವುದರಿಂದ ಆಗಿರುವ ನಷ್ಟ ಎಷ್ಟು ?

ಶ್ರೀ ಜೆ.ಎಸ್. ಬಾಗಲಕೋಟ್. —ಈ ವರ್ಷ ಬೆಳೆಸಿದ ಸಸಿಗಳಲ್ಲಿ ಸತ್ತುಹೋದ ಸಂಖ್ಯೆ ಈಗಲೇ ಸಿಕ್ಕುವುದಿಲ್ಲ, ಸಸಿಯನ್ನು ಬೆಳೆಸುವಂತಹ ಕಾರ್ಯಕ್ರಮ ನಡೆದಿದೆ, ಹೋದ ವರ್ಷ ಎಷ್ಟು ಸಸಿಗಳು ಉಪಯೋಗವಾಗಿಲ್ಲ ಎಲ್ಲ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ, ಅದನ್ನು ನಾನು ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಈ ಸಸಿಗಳನ್ನು ಬೆಳೆಸತಕ್ಕ ಕಾರ್ಯಕ್ರಮದಲ್ಲಿ ಬಹಳಷ್ಟು ಹಣ ದುರುಪಯೋಗವಾಗುತ್ತಿದೆ. ೨೭ ಲಕ್ಷ ಸಸಿಗಳನ್ನು ಬೆಳಸಲಿಕ್ಕೆ ಸಾಧ್ಯತೆ ಇಲ್ಲ. ಅದನ್ನು ಮಾಡಿರುವುದು ಇಲ್ಲ. ೨೭ ಲಕ್ಷ ಸಸಿಗಳನ್ನು ಮಾಡಿದರೆ ಕರ್ನಾಟಕದಲ್ಲಿ ಅವುಗಳನ್ನು ನೆಡಲಿಕ್ಕೆ ಜಾಗ ಇಲ್ಲ. ಆದ್ದರಿಂದ, ಇವರು ಅಷ್ಟೊಂದು ಸಸಿಗಳನ್ನು ಬೆಳೆಸಿಲ್ಲ. ಗ್ರೀನ್‌ಬೆಲ್ಟ್‌ನಲ್ಲಿ ಮರಗಳನ್ನು ಕಡಿದು ಸಸಿಗಳನ್ನು ಬೆಳೆಸುವುದು ಮಾಡುತ್ತಿದ್ದಾರೆ. ಇದರಲ್ಲಿ ಬಹಳಷ್ಟು ಹಣ ದುರುಪಯೋಗವಾಗುತ್ತಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಜೆ. ಎಸ್. ಬಾಗಲ್‌ಕೋಟೆ.—ಸನಾನ್ಯ ಸದಸ್ಯರು ಗ್ರೀನ್‌ಬೆಲ್ಟ್‌ನಲ್ಲಿ ಮರಗಳನ್ನು ಕಡಿದು ಸಸಿಗಳನ್ನು ಮಾಡುತ್ತಿದ್ದಾರೆಂದು ಏನು ಹೇಳುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದ ಮಾತು. ಆ ತರಹದ ಯಾವುದೇ ಕಾರ್ಯಕ್ರಮ ಅರಣ್ಯ ಇಲಾಖೆಯಲ್ಲಿ ಇಲ್ಲ. ಅರಣ್ಯ ಇಲಾಖೆಯ ಮುಖ್ಯ ಉದ್ದೇಶ ಅಂದರೆ ಎಲ್ಲೆಲ್ಲಿ ಮರಗಳನ್ನು ಬೆಳೆಸಲಿಕ್ಕೆ ಸಾಧ್ಯವಿದೆ ಅಲ್ಲಿ ಮರಗಳನ್ನು ಬೆಳೆಸಬೇಕೆಂಬುದೇ ಅರಣ್ಯ ಇಲಾಖೆಯ ಉದ್ದೇಶ. ಜನರು ತಮ್ಮ ಮನೆಯ ಮುಂದೆ, ಅಥವಾ ಅಂಗಳದ ಮುಂದೆ ಗಿಡ ಮರಗಳನ್ನು ಬೆಳೆಸುತ್ತೇವೆಂದರೆ ಅವರಿಗೆ ಪುಕ್ಕಟ್ಟೆಯಾಗಿ ಸಸಿಗಳನ್ನು ವಿತರಣೆ ಮಾಡಬೇಕೆಂಬುದೇ ಅರಣ್ಯ ಇಲಾಖೆಯ ಉದ್ದೇಶ. ಇವೊತ್ತಿಗೂ ಅದು ಅಗತ್ಯ ಕೂಡ. ಇನ್ನು ಮಾನ್ಯ ಸದಸ್ಯರು ಅರಣ್ಯ

ಇಲಾಖೆಯಲ್ಲಿ ಸಸಿಗಳನ್ನು ಬೆಳಿಸುವುದರಲ್ಲಿ ಹಣ ದುರುಪಯೋಗವಾಗಿದೆ ಎನ್ನುವ ಅಂಶವನ್ನು ತಿಳಿಸಿದ್ದಾರೆ, ಆ ಬಗ್ಗೆ ನಿರ್ದಿಷ್ಟ ವಾದಂಥ ಆಪಾದನೆಯನ್ನು ಸನ್ಮಾನ್ಯ ಸದಸ್ಯರು ಕೊಟ್ಟರೆ ಆ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ —ಈಗ ವೆಣಸಿನ ಗಿಡಗಳನ್ನು ಬೆಳಿಸತಕ್ಕ ಹೊಸ ಸ್ಕೀಮ್ ಪ್ರಾರಂಭವಾಗಿದೆ ಇದನ್ನು ಯಾವ ಉದ್ದೇಶದಿಂದ ಬೆಳಿಸುತ್ತೀರಾ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಇನ್ನು ಖಾಸಗಿಯಾಗಿ ಮರ ಬೆಳಿಸತಕ್ಕವರು ಮಾರಾಟ ಮಾಡುತ್ತಿದ್ದಾರೆ ಅದರ ಬಗ್ಗೆಯೂ ಸಹ ಮಾನ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ಶ್ರೀ ಜಿ. ಎಸ್. ಬಾಗಲಕೋಟಿ.—ಖಾಸಗಿ ಮರ ಬೆಳಿಸುವ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ ಅದರ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ. ಇನ್ನು ಮಾನ್ಯ ಸದಸ್ಯರು ವೆಣಸಿನ ಸಸಿ ಬೆಳಿಸುವ ಉದ್ದೇಶ ಕೇಳಿದ್ದಾರೆ. ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ವೆಣಸಿನ ಗಿಡ ಮರದ ಜೊತೆ ಬೆಳೆಯುವಂತಾದ್ದು, ಕೊಡಗು ಇನ್ನಿತರೇ ಕಡೆ ಅದಕ್ಕೆ ಹೆಚ್ಚಿಗೆ ಬೇಡಿಕೆ ಇರುವುದರಿಂದ ಮೂರು ನಾಲ್ಕು ವರ್ಷಗಳಿಂದ ಅರಣ್ಯ ಇಲಾಖೆಯವರು ಅಂತಹ ಸಸಿಗಳನ್ನು ಬೆಳಿಸಿ ಬಡ ರೈತರಿಗೆ ಕೊಡುವಂತಹ ಅವಶ್ಯಕತೆ ಇದೆ, ಎಂದು ಬೆಳಿಸುತ್ತಿದ್ದಾರೆ,

ಚಿಕ್ಕಮಂಗಳೂರು ಜಿಲ್ಲೆಗೆ ಹಾಲಿನ ಡೈರಿ

೨೩೧೧ ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ವಸತಿ ಮತ್ತು ಪಶು ಸಂಗೋಪನ ಪಶುವೈದ್ಯ ಸೇವಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರತ್ಯೇಕ ಹಾಲಿನ ಡೈರಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನರಸಿಂಹರಾಜಪುರ ತಾಲ್ಲೂಕಿನ ಬಾಳೆಹೊನ್ನೂರಿನಲ್ಲಿರುವ ಹಾಲು ಶೀತಲೀಕರಣ ಕೇಂದ್ರವು ಸಮರ್ಪಕವಾಗಿ ಕೆಲವಾರು ವರ್ಷಗಳಿಂದ ಕೆಲಸ ನಿರ್ವಹಿಸದೆ ಇರುವುದರಿಂದ ಮಲೆನಾಡು ಪ್ರದೇಶವಾದ ಕೊಪ್ಪ ಹಾಲು ಉತ್ಪಾದಕರ ಸಂಘಗಳಲ್ಲಿ ಹಾಲು ಸಂಗ್ರಹಣಾ ಮಾರ್ಗವು ಸರಿ ಇಲ್ಲದಿರುವುದರಿಂದ ಸಹಕಾರ ಸಂಘಗಳು ಮುಚ್ಚುವ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಹಾಲಿನ ಡೈರಿಯನ್ನು ಪ್ರಾರಂಭಿಸಲು ಮತ್ತು ಬಾಳೆಹೊನ್ನೂರಿನ ಶೀತಲೀಕರಣ ಕೇಂದ್ರವು ಸರಿಯಾಗಿ ನಡೆಯುವಂತೆ ಸರ್ಕಾರವು ಕ್ರಮಕೈಗೊಳ್ಳುವುದೆ?

ಶ್ರೀ ಮಹಮ್ಮದ್ ಪೊಯಿನಾದ್ವೀನ್ (ವಸತಿ ಹಾಗೂ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು).—

ಅ) ಹೌದು.

ಆ) ಹೌದು

ಇ) ಚಿಕ್ಕಮಗಳೂರಿನಲ್ಲಿ ಹಾಲಿನ ಡೈರಿಯನ್ನು ಸ್ಥಾಪಿಸುವ ವಿಚಾರ ಸದ್ಯಕ್ಕೆ ಸರ್ಕಾರದ ಮುಂದಿಲ್ಲ. ಬಾಳೆಹೊನ್ನೂರಿನಲ್ಲಿ ಶೀಘ್ರದಲ್ಲಿಯೇ ೨೦೦೦ ಲೀಟರ್ ಸಾಮರ್ಥ್ಯದ ಫಾರ್ಮ್ ಕೂಲರ್ ಅನ್ನು ಸ್ಥಾಪಿಸಿ ಕಾರ್ಯಗತಗೊಳಿಸಲು ಕ್ರಮ ಜರುಗಿಸಲಾಗುತ್ತದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮಾನ್ಯ ಉಪಾಧ್ಯಕ್ಷರೆ, ನನ್ನ ''ಆ'' ಪ್ರಶ್ನೆ 'ನರಸಿಂಹರಾಜಪುರ ತಾಲ್ಲೂಕಿನ ಬಾಳೆಹೊನ್ನೂರಿನಲ್ಲಿರುವ ಹಾಲು ಶೀತಲೀಕರಣ ಕೇಂದ್ರವು ಸಮರ್ಪಕವಾಗಿ ಕೆಲವಾರು ವರ್ಷಗಳಿಂದ ಕೆಲಸ ನಿರ್ವಹಿಸದೆ ಇರುವುದರಿಂದ ಮಲೆನಾಡು ಪ್ರದೇಶವಾದ ಕೊಪ್ಪ ಹಾಲು ಉತ್ಪಾದಕರ ಸಂಘಗಳಲ್ಲಿ ಹಾಲು ಸಂಗ್ರಹಣಾ ಮಾರ್ಗವು ಸರಿ ಇಲ್ಲದಿರುವುದರಿಂದ ಸಹಕಾರ ಸಂಘಗಳು ಮುಚ್ಚುವ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ' ಎಂದು ಕೇಳಿರುವುದಕ್ಕೆ 'ಬಂದಿದೆ'ಎಂದು ಉತ್ತರವನ್ನು ಕೊಟ್ಟಿದ್ದಾರೆ. ಸ್ವಾಮಿ, ೧೯೮೨-೮೩ರಲ್ಲಿ ಈ ಶೀತಲೀಕರಣ ಯಂತ್ರವನ್ನು ಇನ್‌ಸ್ಟಾಲ್ ಮಾಡಿದ್ದಾರೆ. ಆದು ಇದುವರೆಗೂ ಸಮರ್ಪಕವಾಗಿ ಕೆಲಸವನ್ನು ಮಾಡುತ್ತಿಲ್ಲ ಎಂಬ ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ಮತ್ತು ಇಲಾಖೆಯವರ